SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar

SDUAHER

UNIVERSITY LIBRARY & LEARNING RESOURCE CENTRE


Online Newspaper Clipping Service

ಕೋಲಾರಪತ್ರಿಕೆ

Dtd- Tuesday, 05th, November- 2019



# ಜಾಲಪ್ಪ ಆಸ್ಪತ್ರೆಯಿಂದ ಭ್ರಷ್ಟಾಚಾರದ ಬಗ್ಗೆ ಅರಿವು ಮೂಡಿಸುವ ಜಾಥಾ





ಕೋಲಾರ ನ ೪ – ಭ್ರಷ್ಟಾಚಾರದ ಅರಿವು ಮೂಡಿಸುವ ವಾರದ ಪ್ರಯುಕ್ತವಾಗಿ ಶ್ರೀ ದೇವರಾಜ್ ಅರಸು ಮೆಡಿಕಲ್ ಕಾಲೇಜಿನ ಡಿಪಾರ್ಟ್‌ಮೆಂಟ್ ಆಫ್ ಪಿಜಿಯೋಥೆರಪಿ, ಆಲೈಡ್ ಹೆಲ್ತ್ ಸೈನ್ಸ್ ವರ್ಗದವರಿಂದ ಭ್ರಷ್ಟಾಚಾರದ ಬಗ್ಗೆ ಅರಿವು ಮೂಡಿಸುವುದಕ್ಕಾಗಿ ನಗರದ ಅಂತರಗಂಗೆ ರಸ್ತೆಯಲ್ಲಿರುವ ಜಾಲಪ್ಪ ಆಸ್ಪತ್ರೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಆಸ್ಪತ್ರೆಯ ಅಧೀಕ್ಷಕರಾದ ಲಕ್ಷ್ಮಯ್ಯ, ಪಿಜಿಯೋಥೆರಪಿ ಹೆಚ್.ಓ.ಡಿ ರಮೇಶ್ ಹಾಗೂ ಇನ್ನಿತರರು ಭ್ರಷ್ಟಾಚಾರದ ಬಗ್ಗೆ ಮಾತನಾಡಿದರು. ಭ್ರಷ್ಟಾಚಾರವನ್ನು ಕೊನೆಗೊಳಿಸುವುದು ನಮ್ಮೆಲ್ಲರ ಕರ್ತವ್ಯ. ಇಬ್ಬರಿಂದ ಸಾಧ್ಯವಿಲ್ಲ ಎಂದರು.

ಭ್ರಷ್ಟಾಚಾರದ ನಿರ್ಮೂಲನೆಯ ಕರಪತ್ರಗಳನ್ನು ಹಂಚುವ ಮೂಲಕ ಭ್ರಷ್ಟಾಚಾರದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಆರ್.ಎಲ್‌ಜಾಲಪ್ಪ ಆಸ್ಪತ್ರೆಯಿಂದ ಕ್ಲಾಕ್ ಟವರ್ ವರೆಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.